VIJAYA VANI

# ಜಪಾನ್ ಶೃಂಗಸಭೆಯಲ್ಲಿ ಅಮೃತ ವಿಶ್ವವಿದ್ಯಾಪೀಠ ವಿದ್ಯಾರ್ಥಿಗಳಿಗೆ ಪ್ರಶಸ್ತಿ

ಬೆಂಗಳೂರು: ನಗರದ ಅಮೃತ ವಿಶ್ವ ವಿದ್ಯಾಪೀಠದ ವಿದ್ಯಾರ್ಥಿಗಳು ಜಪಾನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಯುವ ಶೃಂಗಸಭೆಯಲ್ಲಿ ತಂತ್ರಜ್ಞಾನ ಮತ್ತು ಕಾನೂನಿನ ನಡುವಿನ ಕಾನೂನು ಮಂದಗತಿ ವಿಷಯ ಪ್ರಸ್ತುತಪಡಿಸಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅಮೃತ ವಿಶ್ವ ವಿದ್ಯಾಪೀಠ ಮತ್ತು ಜಪಾನ್‌ನ ರಿಟ್ಸುಮೈಕನ್ ವಿಶ್ವವಿದ್ಯಾಲಯದ ಸಹಯೋಗವಾದ ಅಮೃತ-ರಿಟ್ಸುಮೈಕನ್ ಅಂತಾರಾಷ್ಟ್ರೀಯ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮವನ್ನು 2025 ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ಹಮ್ಮಿಕೊಳ್ಳಲಾಗಿತ್ತು. ಇದರಿಂದಾಗಿ ವಿದ್ಯಾರ್ಥಿಗಳು ಈ ಶೃಂಗಸಭೆಯಲ್ಲಿ ಭಾಗವಹಿಸಲು ಅವಕಾಶ ಒದಗಿ ಬಂದಿತ್ತು. ಡಾ. ಪೂಜಾ ಕೆಂಚೆಟ್ಟಿ ಅವರ ಮಾರ್ಗದರ್ಶನದಲ್ಲಿ, ಆರ್ಯನ್ ಗೆರಾ, ಪುಸಲಾ ಪವನ್ ನಾಯ್ಡು, ದಿಗ್ವಿಜಯ್ ಸಿಂಗ್, ಮಾನ್ವಿತಾ, ಕೋಸಿ, ಪ್ರೊಹಿನ್ ಮತ್ತು ಎನ್. ಆದರ್ಶ ಅವರನ್ನೊಳಗೊಂಡ ತಂಡದ ವಿಷಯ ಪ್ರಸ್ತುತತೆ ಚಿನ್ನದ ಪ್ರಶಸ್ತಿಗೆ ಭಾಜನವಾಗಿದೆ. ಈ ಗೆಲವು ವಿದ್ಯಾರ್ಥಿಗಳ ಶೈಕ್ಷಣಿಕ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ.